## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ / ಇಲಾಖಾ ಮುಖ್ಯಸ್ಥರುಗಳ ಎಲ್ಲಾ ಕಛೇರಿಗಳಲ್ಲಿ ಎಲ್ಲಾ ಕಡತಗಳನ್ನಜ ಹಾಗೂ ಪತ್ರಗಳನ್ನು e-office ಮೂಲಕವೇ ಚಲನವಲನಗೊಳಿಸುವ ಬಗ್ಗೆ.

***

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರದ ಸಚಿವಾಲಯ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮತ್ತು ಎಲ್ಲಾ ಇಲಾಖಾ ಮುಖ್ಯಸ್ಥರುಗಳ ಕಛೇರಿಗಳಲ್ಲಿ ಕರ್ನಾಟಕ ಸರ್ಕಾರವು ಎನ್.ಐ.ಸಿ ಅವರು ಅಭಿವೃದ್ಧಿಪಡಿಸಿರುವ e-office ತಂತ್ರಾಂಶವನ್ನು ಪರಿಚಯಿಸಿದೆ. e-office ತಂತ್ರಾಂಶದಲ್ಲಿಯೇ ಎಲ್ಲಾ ಹೊಸ ಕಡತಗಳನ್ನು ಸೃಜಿಸಿ ನಂತರದ ಪ್ರಕ್ರಿಯೆಗಳನ್ನು ಸಹ ಈ ತಂತ್ರಾಂಶದಲ್ಲಿಯೇ ಮಾಡಬೇಕೆಂದು ಸೂಚನೆ ಸಹ ನೀಡಲಾಗಿದೆ.

ಇತ್ತೀಚೆಗೆ ಜರುಗಿದ ಕಾರ್ಯದರ್ಶಿಗಳ ಸಭೆಯಲ್ಲಿ ಕಡತಗಳ ಚಲನವಲನವನ್ನು ಮತ್ತು ಕಡತಗಳ ನಿರ್ವಹಣಾ ಹಂತಗಳನ್ನು ಕಡಿಮೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ನಿರ್ದೇಶಿಸಿರುತ್ತಾರೆ. ಮುಂದುವರೆದು ಜಿಲ್ಲಾಧಿಕಾರಿಗಳು/ಇಲಾಖಾ ಮುಖ್ಯಸ್ಥರುಗಳಿಂದ ಸ್ವೀಕರಿಸಲಾಗುವ ಪ್ರಸ್ತಾವನೆಗಳನ್ನು ಕಾರ್ಯದರ್ಶಿಗಳ ಹಂತದಲ್ಲಿಯೇ ನಿರ್ವಹಿಸತಕ್ಕದ್ದೆಂದು ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸಿರುತ್ತಾರೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಅ.ಸು) 56 ಕತವ 2021,**

**ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2021.**

ದಿನಾಂಕ: 1.10.2021 ರಿಂದ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಪ್ರಸ್ತಾವನೆಗಳು, ಪತ್ರಗಳು ಹಾಗೂ ವರದಿಗಳನ್ನು ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿಗೆ e-office ಮೂಲಕವೇ ಚಲನವಲನಗೊಳಿಸಬೇಕು. ಸಂಬಂಧಪಟ್ಟ ಅಧಿಕಾರಿಯು ಸಂಬಂಧಿಸಿದ ಕಾರ್ಯದರ್ಶಿಗೆ ಪ್ರಸ್ತಾವನೆಗಳನ್ನು ಏಕ ಕಡತ ರೀತಿಯಲ್ಲಿ e-office ಮೂಲಕವೇ ಕಳುಹಿಸಬೇಕು.

2. ಕಾರ್ಯದರ್ಶಿಗಳು ಸಾಧ್ಯವಾದಷ್ಟು ತಮ್ಮ ಮಟ್ಟದಲ್ಲೇ ವಿಷಯವನ್ನು ವಿಲೇಗೊಳಿಸಬೇಕು ಅಥವಾ ಸಂಬಂಧಿಸಿದ ಸಚಿವರಿಗೆ ಆದೇಶಕ್ಕಾಗಿ ಸಲ್ಲಿಸಬೇಕು. ವಿಷಯದ ಬಗ್ಗೆ ಹೆಚ್ಚುವರಿ ಮಾಹಿತಿ ಬೇಕಾಗುವಂಥ ಅಸಾಧಾರಣ ಪ್ರಕರಣಗಳ e-office ಕಡತಗಳನ್ನು ಅಥವಾ ಸಚಿವ ಸಂಪುಟ ಟಿಪ್ಪಣಿಯನ್ನು ತಯಾರಿಸಿ ಸಚಿವ ಸಂಪುಟದ ಮುಂದೆ ತರಬೇಕಾಗುವಂಥ ವಿಷಯಗಳಿಗೆ ಸಂಬಂಧಿಸಿದ e-office ಏಕ ಕಡತಗಳನ್ನು ಮಾತ್ರ ಕಾರ್ಯದರ್ಶಿಯವರು ಸಂಬಂಧಿಸಿದ ಉಪ ಕಾರ್ಯದರ್ಶಿಗಳಿಗೆ ಕಳುಹಿಸಬಹುದು.

ಪು.ತಿ.ನೋ

Scanned by CamScanner

3. ಅಂತೆಯೇ, ಸಚಿವಾಲಯಕ್ಕೆ ಕಳುಹಿಸುವ ಎಲ್ಲಾ ಪತ್ರಗಳು/ವರದಿಗಳನ್ನು e-office ನಲ್ಲಿ ಸ್ವೀಕೃತಿಗಳಾಗಿ ಕಳುಹಿಸಬೇಕು.

4. e-office ವ್ಯವಸ್ಥೆಗೆ ಬದಲಾವಣೆ/ವರ್ಗಾವಣೆ ಮಾಡಿಕೊಳ್ಳುವಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಉಂಟಾದಲ್ಲಿ ಈ ಬಗ್ಗೆ ನೆರವು ಪಡೆಯಲು ಎನ್.ಐ.ಸಿ ಮತ್ತು ಸೆಂಟರ್ ಫಾರ್ ಈ-ಆಡಳಿತ ಮತ್ತು ಸಿಆಸುಇ (ಈ-ಆಡಳಿತ) ಇವರನ್ನು ಸಂಪರ್ಕಿಸಬಹುದು.

5. ಈ ಆದೇಶವು ದಿನಾಂಕ: 1ನೇ ಅಕ್ಟೋಬರ್, 2021 ರಿಂದ ಜಾರಿಗೆ ಬರುತ್ತದೆ. ಈ ಆದೇಶವನ್ನು ಉಲ್ಲಂಘಿಸುವ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಿ. ರವಿ ಕುಮಾರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ.

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
2. ಎಲ್ಲಾ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯತ್ತುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5. ಶಾಖಾ ರಕ್ಷಾ ಕಡತ

Scanned by CamScanner

**PROCEEDINGS OF THE GOVERNMENT OF KARNATAKA**

Sub: Movement of all files and letters in all the offices of Deputy Commissioners/Chief Executive Officers/Heads of Departments of the Government through e-Office reg.

***

**Preamble:**

Government of Karnataka has introduced e-office soft-ware, developed by NIC, in Karnataka Government Secretariat and offices of all Deputy Commissioners, CEOs of Zilla Panchayats and Heads of Departments. Instructions have also been issued that all new files should be created and processed in e-office.

During the Secretaries meeting held recently, Hon'ble Chief Minister had directed that the movement of files and the number of levels at which the files are handled should be reduced. Chief Minister further instructed that the proposals being received from Deputy Commissioners/Heads of the Departments should be handled at the level of the Secretary. Hence, the following order:

**Government Order No. DPAR (AR) 56 KTV 2021,**

**Bengaluru, Dated: 15th September, 2021.**

From 1.10.2021 onwards, movement of proposals, letters and reports by the Deputy Commissioners, CEOs of Zilla Panchayats and Heads of Departments to the Secretary to Government concerned should be only through e-office. Proposals should be sent as a Single file by the concerned officer to the Secretary concerned through e-office.

2. The Secretary should, as far as possible, dispose of the matter at his/her level or submit it to the Minister concerned for orders. Only in exceptional cases, where the matter requires additional information or if the matter has to be brought before the Cabinet and Cabinet Note has to be prepared, the Secretary can send the e-office single file to the Deputy Secretary concerned.

3. Similarly, all letters/reports to the Secretariat should be sent as receipts in e-office.

p.t.o

Scanned by CamScanner

4. The NIC and Centre for e-Governance, DPAR (e-Governance) can be contacted for any handholding for migration to e-office and transfer of files or any technical issues.

5. This order comes into force with effect from 1st October, 2021. Any officer who violates this order shall be liable for action.

By Order and in the name of the
Governor of Karnataka,

(P. RAVI KUMAR)
Chief Secretary to Government.

To:

1. All the Additional Chief Secretaries/Principal Secretaries/Secretaries of the Government
2. All the Deputy Commissioners
3. All the Chief Executive Officers, Zilla Panchayat
4. All the Heads of Departments
5. Section Guard File

Scanned by CamScanner